ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಎಲ್ಲಾ ಪಕ್ಷಗಳಿಗೆ ಪ್ರಾತಿನಿಧ್ಯ ಕೊಡುತ್ತೇವೆ ಎಂದು ಹೇಳಿದ್ದರು. ಏಕೆ ಈ ರೀತಿ ಮಾಡಿದರು ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿರೋಧ ಪಕ್ಷಕ್ಕೆ ಸರಿಯಾದಂಥ ಪ್ರಾತಿನಿಧ್ಯವನ್ನು ಕೊಡ ಬೇಕು ತಾನೇ ? ಯಾವ ಒಂದು ಆಡಿಕೆ ಕತ್ತರಿ ಪರಿಸ್ಥಿತಿ ಬಂದಿದೆ, ಯಾವ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಬೇಕು ಎಂದು ನಾವು ಹೇಳುತ್ತಿದ್ದೇವೆಯೋ, ನೀವು ಎಲ್ಲಿ ನಾಳೆ ಸಿಕ್ಕಿಹಾಕಿ ಕೊಳ್ಳುತ್ತೇವೆ ಎನ್ನುವ ಭಯ ನಿಮಗೆ ಆಗಿರುವುದು ಸ್ಪಷ್ಟವಾಗಿದೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ವಿರೋಧ ಪಕ್ಷಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತು ತಾನೇ ? ನಿಜವಾಗಿಯೂ ವಿರೋಧ ಪಕ್ಷದ ಒಬ್ಬ ನಾಯಕನನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಿ ನೀವೇ ಹೋಗಿ ಸ್ಪಾಟ್‌ಗೆ ಹೋಗಿ ನೋಡಿಕೊಂಡು ಬನ್ನಿ ಎಂದು ಸರ್ಕಾರಕ್ಕೆ ಗಿಲ್ಟಿ ಇಲ್ಲದಿದ್ದರೆ ಹೇಳಬೇಕಾಗಿತ್ತು. ಅವರು ನಿಜವಾಗಿಯೂ ಪ್ರಾಮಾಣಿಕವಾಗಿ ಇದ್ದಿದ್ದರೆ ಆ ರೀತಿ ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾವ್ಯಾರೂ ನೀವು ಮಾಡಿರತಕ್ಕಂಥ ಸಮಿತಿಯಲ್ಲಿ ಇರುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನನ್ನದೇ ಆದಂಥ ಸ್ವತಂತ್ರವಾದ ಸಮಿತಿಯಲ್ಲಿ ನಾನು ಹೋಗುತ್ತೇವೆ. ಪತ್ರಕರ್ತರನ್ನು ಕರೆದುಕೊಂಡು ಹೋಗುತ್ತೇವೆ. ಇದು ನಿಜವಾಗಿಯೂ ಅಧ್ಯಕ್ಷರಿಗೆ ಮಾಡಿರತಕ್ಕಂಥ ಅಗೌರವ. ಏಕೆಂದರೆ ತಮ್ಮ ಹತ್ತಿರ ಇದರ ಬಗ್ಗೆ ಸಮಾಲೋಚನೆ ಮಾಡಿ ಯಾರನ್ನಾದರೂ ಹಾಕಬೇಕು ಎಂದು ಸದನದ ಸಮಿತಿಯನ್ನು ಮಾಡತಕ್ಕಂಥ ಹಕ್ಕು ನಿಮ್ಮಲ್ಲಿ ಇರತಕ್ಕಂಥದ್ದು. ಇವರು ಆ ಹಕ್ಕನ್ನೂ ಸಹ ಕಸಿದುಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರ ನಿಮ್ಮನ್ನೂ ಕೂಡ ದುರುಪಯೋಗ ಮಾಡಿ ಕೊಂಡಿದೆ.

ಶ್ರೀ ವಾಟಾಳ್ ನಾಗರಾಜ್.—ಇದೊಂದು ಮೋಸ.

SRI QUMARUL ISLAM:—We ourselves will go as a Committee and submit a report.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸಿ.ಓ.ಡಿ.ಯನ್ನು ದುರುಪಯೋಗ ಮಾಡಿಕೊಂಡಿದ ಆಯಿತು. ಈಗ ಟೇರನ್ನೂ ಕೂಡ ದುರುಪಯೋಗ ಮಾಡಿಕೊಳ್ಳುವುದಕ್ಕೆ ಈ ಸರ್ಕಾರ ಹೊರಟಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಯಾರಿಗೆ ಬೇಕಾಗಿದೆ ಈ ಸಮಿತಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಈ ಸಮಿತಿಯಲ್ಲಿ ಇರುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀ ಬಾಬಾಗೌಡ ಪಾಟೀಲರು, ಶ್ರೀ ಕಮರುಲ್ ಇಸ್ಲಾಂರವರು, ಶ್ರೀ ಬಿ.ಎಸ್. ಯಡಿಯೂರಪ್ಪನವರು ಮತ್ತು ಪ್ರೊ॥ ಎಂ.ಡಿ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು.)